ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 141-151
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕಿರು ಹಣಕಾಸು ಸಂಸ್ಥೆ ಮತ್ತು ಸ್ವಸಹಾಯ ಗುಂಪುಗಳು

**ನಿಂಗಪ್ಪ ಪ. ಮಾದರ[1] ಮತ್ತು ಡಾ. ಬಿ.ಎಮ್.ರತ್ನಾಕರ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

***Abstract:***

*ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಒಂದಾಗಿದ್ದು, ಆರ್ಥಿಕ ಸುಧಾರಣೆ, ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆ ಮತ್ತು ಲಿಂಗ ತಾರತಮ್ಯ ಇಂತಹ ಸಮಸ್ಯೆಯಗಳನ್ನು ನಿರ್ಮೂಲಣೆ ಮಾಡಲು ಕಿರು ಹಣಕಾಸು ಮತ್ತು ಸ್ವಸಹಾಯ ಗುಂಪುಗಳು ಉತ್ತಮ ಸಾಧನವಾಗಿ ಪರಿಣಮಿಸುತ್ತಿವೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.68.84% ರಷ್ಟು, ಜನರು ಗ್ರಾಮೀಣ ಪ್ರದೇಶದಲ್ಲಿ ನಿವಾಸಿಗಳಾಗಿದ್ದು, ಅದರಲ್ಲಿ ಶೇ.48.68%ರಷ್ಟು, ಮಹಿಳೆಯರು ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಬಡತನ, ನಿರುದ್ಯೋಗ, ಲಿಂಗ ತಾರತಮ್ಯ ಮತ್ತು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ತುಂಬಾ ಚಿಂತಾಜನಕವಾಗಿದ್ದು, ಅದರಿಂದ ಮಹಿಳೆಯರನ್ನು ಮತ್ತು ಅವರ ಕುಟುಂಬವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲೆತ್ತಲು, ಅವರ ಜೀವನಶೈಲಿಯನ್ನು ಸುಧಾರಿಸಲು ಕಿರು ಹಣಕಾಸು ಮತ್ತು ಸ್ವಸಹಾಯ ಗುಂಪುಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ. ವಿಶೇಷವಾಗಿ, ಗ್ರಾಮೀಣ ಭಾಗದ ಕುಟುಂಬಗಳು ಮತ್ತು ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಕಿರು ಹಣಕಾಸು ಮತ್ತು ಸ್ವಸಹಾಯ ಗುಂಪುಗಳು ತಮ್ಮ ಯೋಜನೆಗಳು ಮತ್ತು ಸೌಲಭ್ಯಗಳಿಂದ, ಸಣ್ಣ ಸಾಲಗಳು, ಸಬ್ಸಿಡಿ ಸಾಲಗಳು, ಉಳಿತಾಯದ ಮನೋಭಾವನೆಗಳು, ಉತ್ಪಾದನೆ ಚಟುವಟಿಕೆಗಳು ಮತ್ತು ಗುಡಿ ಕೈಗಾರಿಕೆಗಳು ಹೀಗೆ, ಮುಂತಾದ ಹಣಕಾಸು ಸೇವೆಗಳನ್ನು ಒದಗಿಸಿ, ಮಹಿಳೆಯರನ್ನು ವಿವಿಧ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಹೊಂದಲು ಅವಕಾಶ ಮಾಡಿಕೊಟ್ಟಿವೆ. ಮುಂದುವರೆದೂ, ಬ್ಯಾಂಕಿಂಗ್ ವ್ಯವಸ್ಥೆ, ಸಹಕಾರಿ ಸಂಘಗಳು, ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಹೀಗೆ, ಹತ್ತು ಹಲವು ಸರ್ಕಾರೇತರ ಸಂಘಗಳ ಸಾಲ ಸೌಲಭ್ಯಗಳಿಂದ ಗ್ರಾಮೀಣ ಮಹಿಳೆಯರಲ್ಲಿ ಸ್ವಾವಲಂಬನೆಯು ಹೆಚ್ಚಾಗಿ ಉದ್ಯೋಗಿಗಳಾಗಿ, ಆರ್ಥಿಕ ಸಬಲರಾಗಿ, ಶಿಕ್ಷಣವಂತರಾಗಿ ಕೊನೆಗೆ ಸಮಾಜದಲ್ಲಿ ಗೌರಯುತವಾದ ಸ್ಥಾನಮಾನಗಳನ್ನು ಗಳಿಸಲು ಸಾಧ್ಯವಾಗಿದೆ. ಇವೆಲ್ಲವೂ, ಮಹಿಳಾ ಸಬಲೀಕರಣಕ್ಕೆ ಕಾರಣವಾಗಿವೆ.*

***Keywords:*** *ಕಿರು ಹಣಕಾಸು, ಸ್ವಸಹಾಯ ಗುಂಪುಗಳು, ಮಹಿಳಾ ಸಬಲೀಕರಣ, ಗ್ರಾಮೀಣಾಭಿವೃದ್ಧಿ, ಬಡತನ, ಸಾಲಸೌಲಭ್ಯ, ನಬಾರ್ಡ್*

**ಪೀಠಿಕೆ**

ಭಾರತದಲ್ಲಿ 1940ರಲ್ಲಿ 'ಸಹಕಾರಿ ಪತ್ತಿನ ಸಂಘಗಳು ಕಾಯ್ದೆ' ಜಾರಿಗೆ ಬರುವ ಮೂಲಕ 'ಸಹಕಾರಿ ಸಂಘಗಳ ಯುಗ' ಪ್ರಾರಂಭವಾಯಿತು. ಅದರ ಜೊತೆಗೆ 'ಕಿರು ಹಣಕಾಸು ಯೋಜನೆ'ಯು

***Please cite this article as:*** ನಿಂಗಪ್ಪ ಪ. ಮಾದರ ಮತ್ತು ಡಾ. ಬಿ.ಎಮ್.ರತ್ನಾಕರ. (2026). ಕಿರು ಹಣಕಾಸು ಸಂಸ್ಥೆ ಮತ್ತು ಸ್ವಸಹಾಯ ಗುಂಪುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 141–151

ಸ್ಥಾಪನೆಯಾಯಿತು. ಸ್ವಾತಂತ್ರ್ಯ ನಂತರ 1969 ಮತ್ತು 1980ರಲ್ಲಿ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ, ಗ್ರಾಮೀಣ ಆದ್ಯತಾ ವಲಯಗಳಿಗೆ ಸೂಕ್ಷ್ಮ ಹಣಕಾಸು ಪೂರೈಸಲು ನಿರ್ದೇಶನ ನೀಡಲಾಯಿತು. ನಂತರ 1975ರಲ್ಲಿ 'ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ'ನ್ನು ಸ್ಥಾಪಿಸಲಾಯಿತು. ಭಾರತದಲ್ಲಿ ಸುಮಾರು 40ವರ್ಷಗಳಿಂದ ಈಚೆಗೆ ಬ್ಯಾಂಕೊದ್ಯಮ ತೀವ್ರ ತರವಾದ ಬೆಳವಣಿಗೆ ಹೊಂದಿದ್ದರೂ ಸಹ, ಗ್ರಾಮೀಣ ಜನರು ಸಾಲಕ್ಕಾಗಿ ಲೇವಾದೇವಿಗಾರರು, ಜಮೀನುದಾರರು, ದಲ್ಲಾಳಿಗಳು, ವರ್ತಕರು ಮತ್ತು ಸಾಹುಕಾರರು ಹೀಗೆ, ಮುಂತಾದ ಹಣದ ಮೂಲಗಳನ್ನು ಹೊಂದಿರುವ ಅನೌಪಚಾರಿಕ ಸಾಲವನ್ನು ಹೆಚ್ಚಾಗಿ ಅವಲಂಬಿಸಬೇಕಾದ ಪರಿಸ್ಥಿತಿ ಇತ್ತು. ಗ್ರಾಮೀಣ ಭಾಗದ ಬಡ ಜನರಿಗೆ ಸುಲಭವಾಗಿ ಸಾಲ ಸೌಲಭ್ಯಗಳು ದೊರೆಯಲಾರದಂತಹ ಮತ್ತು ಸಿಗಲಾರದಂತಹ ಪರಿಸ್ಥಿತಿಯು ಮುಂದುವರೆದಿತ್ತು. 1981ರ "ಅಖಿಲ ಭಾರತ ಭಾರತೀಯ ಸಾಲ ಮತ್ತು ಹೂಡಿಕೆ ಸಮೀಕ್ಷೆಯ" ಪ್ರಕಾರ, ಗ್ರಾಮೀಣ ಭಾಗದ ಜನರು ಅಥವಾ ಕುಟುಂಬಗಳು ತಮ್ಮ ಒಟ್ಟು ಸಾಲದ ಶೇ.38 ರಷ್ಟು ಸಾಂಸ್ಥಿಕೇತರ ಮೂಲಗಳಿಂದ ಸಾಲ–ಸೌಲಭ್ಯಗಳನ್ನು ಪಡೆದಿದ್ದಾರೆ ಎಂದು ಅಂದಾಜಿಸಲಾಗಿದೆ.

ಬ್ಯಾಂಕುಗಳು ಹಿಂದುಳಿದ ವರ್ಗದ ಅಥವಾ ಬಡ ಕುಟುಂಬದ ಜನರಿಗೆ ಹಣಕಾಸಿನ ನೆರವು ಮತ್ತು ಸಾಲ ಸೌಲಭ್ಯಗಳನ್ನು ನೀಡಲು ಬಯಸಿದರೂ ಸಹ, ಅಲ್ಪ ಮೊತ್ತದ ಸಾಲವನ್ನು ಬಯಸುವ ಈ ವರ್ಗಗಳು ಬ್ಯಾಂಕುಗಳಿಗೆ ಹೆಚ್ಚಿನ ವ್ಯವಹಾರದ ವೆಚ್ಚವನ್ನು ಒಳಗೊಳ್ಳುವಂತೆ ಮತ್ತು ಉಳಿತಾಯಗಳನ್ನು ಠೇವಣಿಗಳ ರೂಪದಲ್ಲಿ ಇಟ್ಟುಕೊಳ್ಳಬೇಕಾದರು, ಬ್ಯಾಂಕುಗಳಿಗೆ ಹೆಚ್ಚಿನ ವೆಚ್ಚ ತಗುಲುವಂತಾಗುತ್ತಿದೆ. ಹೀಗಾಗಿ, ಬ್ಯಾಂಕುಗಳಿಗೆ ಇದು ದುಸ್ಸಾಹಸದ ಕೆಲಸವಾಗಿತ್ತು. 'ಬ್ಯಾಂಕುಗಳು ಶ್ರೀಮಂತರು ಮತ್ತು ಉತ್ತಮ ವರ್ಗದ ಜನರಿಗಾಗಿ ಮಾತ್ರ ಅಸ್ತಿತ್ವದಲ್ಲಿರುವ ಸಂಸ್ಥೆಗಳು' ಎಂದು, ಬಡವರ್ಗಗಳ ಜನರು 'ಬ್ಯಾಂಕಿನ ಸೇವೆಗಳು ತಮಗೆ ಪ್ರವೇಶವೇ ಇಲ್ಲ' ಎಂಬ ನಿರ್ಧಾರವು ಬಡವರ್ಗದ ಜನರಲ್ಲಿ ಬರ ತೊಡಗಿತು.[1] ಎಂಬ ಅಭಿಪ್ರಾಯವನ್ನು ನೋಡಿದಾಗ ಬಡವರು ಮತ್ತು ಮಹಿಳೆಯರು ಬ್ಯಾಂಕು ಮತ್ತು ಅದರ ಹಣಕಾಸಿನ ವ್ಯವಹಾರ ಮತ್ತು ಸಾಲ ಸೌಲಭ್ಯಗಳಿಂದ ಎಷ್ಟು ದೂರವಾಗಿದ್ದರು ಎಂಬುದನ್ನು ತಿಳಿಯಬಹುದು.

ಈ ಸಮಯದಲ್ಲಿ ನಬಾರ್ಡ್ ಸಂಸ್ಥೆಯು, 1980ರ ದಶಕದ ಮಧ್ಯ ಭಾಗದಲ್ಲಿ ಕೆಲವು ಅಧ್ಯಯನಗಳನ್ನು ನಡೆಸಿ, ಗ್ರಾಮೀಣ ಪ್ರದೇಶದ ಬಡ ಕುಟುಂಬಗಳು ಮತ್ತು ಜನರಿಗೆ ಬ್ಯಾಂಕೋದ್ಯಮ, ಸಾಲ–ಸೌಲಭ್ಯ ಮತ್ತು ಅವಶ್ಯಕತೆಗಳನ್ನು ಗುರುತಿಸಿತು. ಗ್ರಾಮೀಣ ಬಡತನ ನಿವಾರಣೆಗೆ ಬ್ಯಾಂಕಿನ ಸಾಲ–ಸೌಲಭ್ಯಗಳ ಯೋಜನೆಯ ಬದಲಿಗೆ, ಒಂದು ಯೋಜನೆಯನ್ನು ವಿಕಾಸಗೊಳಿಸುವ ಸವಾಲು ಎದುರಾಯಿತು. ಆಗ ತಾನು ನಡೆಸಿದ ಅಧ್ಯಯನಗಳು ಮತ್ತು ಕ್ರಿಯಾ ಸಂಶೋಧನೆಗಳಲ್ಲಿ ಬಂದಂತಹ ಫಲಿತಾಂಶಗಳಿಂದ ನಬಾರ್ಡ್ ಸಂಸ್ಥೆಯು "ಸ್ವಸಹಾಯ ಗುಂಪು ಬ್ಯಾಂಕ್ ಜೋಡಣೆ" ಎಂಬ ಹೊಸ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿತು. ಈ ಪರಿಕಲ್ಪನೆಯಿಂದ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು, ತಮ್ಮ ಉಳಿತಾಯಗಳನ್ನು ಒಂದೆಡೆ ಸಂಗ್ರಹಿಸುವುದು, ಹಣಕಾಸಿನ ಪ್ರೋತ್ಸಾಹ ಪಡೆಯುವದು ಮತ್ತು ಗುಂಪಿನ ಉಳಿತಾಯದ ಹಣದಿಂದ ಕಡಿಮೆ ಬಡ್ಡಿದರದಲ್ಲಿ ಸಾಲಗಳನ್ನು ತನ್ನ ಸದಸ್ಯರಿಗೆ ಮತ್ತು ಇತರರಿಗೆ ನೀಡಿ, ಅದರಿಂದ ಬಂದಂತಹ ಹಣಕಾಸಿನ ಮೂಲಗಳನ್ನು ಬಳಸಿಕೊಂಡು ಸದಸ್ಯರ ಮತ್ತು ಗುಂಪಿನ ಆರ್ಥಿಕ

[1] ರಾಜಶ್ರೀ ಎಸ್ ಗುದಗನವರ. (2011). *ಗ್ರಾಮೀಣ ಅಭಿವೃದ್ಧಿಯಲ್ಲಿ ಕಿರು ಹಣಕಾಸು ಸಂಸ್ಥೆ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,

ಬಲಿಷ್ಠತೆ ಸಾಧಿಸುವ ಪ್ರಕ್ರಿಯೆಯನ್ನು ಈ ಕಾರ್ಯಕ್ರಮವು ಒಳಗೊಂಡಿದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆ ಮತ್ತು ಲಿಂಗ ತಾರತಮ್ಯ ಹೋಗಲಾಡಿಸುವುದು ಬಹು ಮುಖ್ಯ ಅಂಶವಾಗಿದ್ದು. ಇವುಗಳನ್ನು ನಿವಾರಿಸಲು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಸ್ವಸಹಾಯ ಗುಂಪುಗಳು ಮುಂಚೂಣಿ ಸ್ಥಾನದಲ್ಲಿ ನಿಲ್ಲುತ್ತವೆ ಮತ್ತು ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತವೆ.

**ಸ್ವಸಹಾಯ ಗುಂಪುಗಳು**

ಮಹಿಳೆಯರು ಸಮಾಜದಲ್ಲಿ ತಮ್ಮ ಶಕ್ತಿಯನ್ನು ಸಾಕಾರಗೊಳಿಸಿಕೊಳ್ಳಲು ಸಾಮಾಜಿಕವಾಗಿ, ಆರ್ಥಿಕವಾಗಿ ಸಶಕ್ತರಾಗಲು, ಸಮಾನ ಮನಸ್ಕರ ಗುಂಪನ್ನು ರಚಿಸಿಕೊಂಡು, ಆರ್ಥಿಕ ವ್ಯವಹಾರ ನಡೆಸುವುದೇ 'ಸ್ವಸಹಾಯ ಸಂಘ'. 1975ರಲ್ಲಿ 'ಪ್ರೊ.ಮಹಮ್ಮದ್ ಯೂನಸ್' ಬಾಂಗ್ಲಾದೇಶದಲ್ಲಿ ಮೊದಲ ಬಾರಿಗೆ 'ಗ್ರಾಮೀಣ ಬ್ಯಾಂಕ್' ಅನ್ನು ಸ್ಥಾಪಿಸುವ ಮೂಲಕ, ಕಿರು ಹಣಕಾಸಿನ ಸಂಸ್ಥೆಗಳ ಹುಟ್ಟಿಗೆ ಅಡಿಪಾಯ ಹಾಕಿದರು. 1971ರಲ್ಲಿ ಭಾರತ ಮತ್ತು ಪಾಕಿಸ್ತಾನದ ಯುದ್ಧದ ಸಂದರ್ಭದಲ್ಲಿ ಬಾಂಗ್ಲಾದ ನಿರಾಶ್ರಿತರು, ತಮ್ಮ ಆರ್ಥಿಕ ಉನ್ನತಿಗೊಳಿಸಲು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡರು.

'ಸ್ವಸಹಾಯ ಗುಂಪುಗಳು ಸಾಮಾನ್ಯವಾಗಿ 10–20 ಜನರನ್ನು ಒಳಗೊಂಡಿರುವ ಗ್ರಾಮ ಆಧಾರಿತ, ಆರ್ಥಿಕ ಮಧ್ಯವರ್ತಿಯ ಒಂದು ಸಮಿತಿಯಾಗಿದೆ. ಇದು ಸ್ಥಳೀಯ ಗ್ರಾಮೀಣ ಮಹಿಳೆಯು ಇದರ ಸದಸ್ಯತ್ವವನ್ನು ಪಡೆದಿರುತ್ತಾರೆ. ಒಂದು ನಿರ್ದಿಷ್ಟ ಉಳಿತಾಯದ ಮೂಲಕ ಹಣವನ್ನು ಸಂಗ್ರಹಿಸಿ ಗುಂಪಿಗೆ ನೀಡುತ್ತಾರೆ. ಈ ಮೊತ್ತದಿಂದ ಒಂದು 'ಸಾಮಾನ್ಯನಿಧಿ'ಯನ್ನು ರಚನೆ ಮಾಡಿ, ಈ ನಿಧಿಯನ್ನು ಗ್ರಾಮೀಣ ಅಥವಾ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಖಾತೆಯನ್ನು ತೆರೆಯುವ ಮೂಲಕ, ನಿಧಿಯಿಂದ ತನ್ನ ಸದಸ್ಯರಿಗೆ ಅಥವಾ ಊರಿನ ಗ್ರಾಮಸ್ಥರಿಗೆ ನಿಗದಿತ ಬಡ್ಡಿದರದಲ್ಲಿ ಸಾಲದ ರೂಪದಲ್ಲಿ ಹಣವನ್ನು ಕೊಟ್ಟು, ನಂತರ ಕೆಲವು ಸಮಯದ/ತಿಂಗಳು/ವರ್ಷದ ನಂತರ ಹಣವನ್ನು ಅಸಲಿನ ಜೊತೆಗೆ ಬಡ್ಡಿಯನ್ನು ಬಟವಾಡೆ ಮಾಡುತ್ತವೆ. ಈ ರೀತಿ ಸಂಗ್ರಹಿಸಿದ ಹಣವನ್ನು, ಸಂಘದ ಆರ್ಥಿಕ ಚಟುವಟಿಕೆಗೆ, ಸದಸ್ಯರ ಆರ್ಥಿಕ ಸಾಲ ನೀಡಲು ಮತ್ತು ಉತ್ಪಾದನಾ ಚಟುವಟಿಕೆ ಸ್ಥಾಪಿಸಲು ಒಂದು ಸಂಘಟಿತ ಗುಂಪುಗಳನ್ನು ರಚಿಸಿಕೊಳ್ಳುವುದೇ, ಸ್ವಸಹಾಯ ಗುಂಪುಗಳು. ಈ ಗುಂಪು ಮೈಕ್ರೋ ಕ್ರೆಡಿಟ್ ಎನ್ನುವ ಹೆಸರಿನಲ್ಲಿ ಮೂಲ ಸೌಕರ್ಯಗಳ ನಿರ್ಮಾಣ, ತಂತ್ರಜ್ಞಾನ, ಸ್ವ–ಸಾಮರ್ಥ್ಯದ ಮೇಲೆ ಉದ್ಯೋಗ ಕೈಗೊಳ್ಳಲು, ಹಣಕಾಸಿನ ಸಹಾಯವನ್ನು ಸಾಲದ ರೂಪದಲ್ಲಿ ಪಡೆಯುವುದು ಗ್ರಾಮೀಣ ಸ್ಥಳೀಯ ಬ್ಯಾಂಕುಗಳೊಂದಿಗೆ ಜೋಡನೆಯಾಗುವ ಜೊತೆಗೆ ಸಾಲ ಸೌಲಭ್ಯಗಳನ್ನು ಜನರಿಗೆ ಒದಗಿಸುವ ಕಾರ್ಯವನ್ನು ಈ ಗುಂಪು ಮಾಡುತ್ತದೆ.

**ಮೈಕ್ರೋ ಫೈನಾನ್ಸ್**

1970ರ ದಶಕದವರೆಗೆ ಕಿರು ಹಣಕಾಸು ಬಗ್ಗೆ ಹೆಚ್ಚು ಪ್ರಚಾರವಿರಲಿಲ್ಲ. ಅದರೆ ಇಂದು ಸ್ವಸಹಾಯ ಗುಂಪುಗಳು, ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಬಡತನವನ್ನು ಹೋಗಲಾಡಿಸುವಲ್ಲಿ ಕಿರು ಹಣಕಾಸು ಹೊಸ ವಿಧಾನವಾಗಿ ಪರಿಣಮಿಸಿದೆ. ಮಹಿಳಾ ಸಬಲೀಕರಣಕ್ಕೆ ಸ್ವಸಹಾಯ ಗುಂಪುಗಳು ಪರಿಣಾಮಕಾರಿ ಅಸ್ತ್ರವಾಗಿದ್ದು, ಇದನ್ನು ಕಿರು ಹಣಕಾಸು ಯೋಜನೆಗಳು ಇನ್ನಷ್ಟು ಬಲಪಡಿಸುವ ಪ್ರಯತ್ನ ಮಾಡಿದೆ. **ಮೇರಿಯಂ–ವೆಬಸ್ಟರ್ ಡಿಕ್ಷನರಿ** ಪ್ರಕಾರ, 'ಕಿರು ಹಣಕಾಸು ಎಂದರೆ ಬಡ ವ್ಯಕ್ತಿಗಳು ಅಥವಾ ಗುಂಪುಗಳಿಗೆ ಸಣ್ಣ ಸಾಲಗಳ ರೂಪದಲ್ಲಿ ಹಣಕಾಸು ಸೇವೆಗಳನ್ನು ನೀಡುವುದು'. ಅದೇರೀತಿ, **ಇಬಿಎಸ್‌ಸಿಒ ಸಂಶೋಧನೆಯ** ಪ್ರಕಾರ, 'ಕಿರು ಹಣಕಾಸು ಎಂದರೆ ಸಾಲದ ಜೊತೆಗೆ ಉಳಿತಾಯ,

ವಿಮೆ ಮುಂತಾದ ವಿವಿಧ ಹಣಕಾಸು ಸೇವೆಗಳ ಸಮೂಹವನ್ನು ಕಡಿಮೆ ಆದಾಯದ ಜನರಿಗೆ ನೀಡುವುದು'[2]. ಒಟ್ಟಾರೆಯಾಗಿ, ಆರ್ಥಿಕವಾಗಿ ಹಿಂದುಳಿದ ಜನರಿಗೆ ಸಣ್ಣ ಮೊತ್ತದ ಸಾಲ, ಉಳಿತಾಯ, ವಿಮೆ ಮತ್ತು ಇತರೆ ಹಣಕಾಸು ಸೇವೆಗಳನ್ನು ಒದಗಿಸುವ ವ್ಯವಸ್ಥೆಯಾಗಿದೆ. ಇದರಲ್ಲಿ ಗ್ರಾಮೀಣ ಬಡವರು, ಸಣ್ಣ ವ್ಯಾಪಾರಿಗಳು ಮತ್ತು ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ ವೇದಿಕೆಯಾಗಿ ರೂಪುಗೊಂಡಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಉದ್ಯಮಶೀಲತೆ ಮತ್ತು ಸಣ್ಣ ಉದ್ಯಮಗಳನ್ನು ಉತ್ತೇಜಿಸಲು ಮೈಕ್ರೋ ಫೈನಾನ್ಸ್ ಪ್ರಮುಖ ಸಾಧನವಾಗಿದೆ. ಅಷ್ಟೇಅಲ್ಲದೆ, ಬಡಜನರನ್ನು ಬಡತನದಿಂದ ಹೊರ ತಂದು ಆರ್ಥಿಕವಾಗಿ ಸದೃಢರಾಗಲು ಈ ಕಾರ್ಯಕ್ರಮವು ಪರಿಣಾಮಕಾರಿಯಾದ ಕೆಲಸ ನಿರ್ವಹಿಸುತ್ತದೆ ಎಂದು ಹೇಳಿದ್ದಾರೆ.

**ಕಿರು ಹಣಕಾಸು ವ್ಯಾಖ್ಯೆಗಳು**

ನಬಾರ್ಡ್(2000) ಮೈಕ್ರೋ ಫೈನಾನ್ಸ್ ಎಂದರೆ, ಕಡಿಮೆ ಆದಾಯ ಹೊಂದಿರುವ ಜನರು ಅದರಲ್ಲೂ ಬ್ಯಾಂಕ್ ಸೇವೆಗಳು ಪರಿಚಯ ಇಲ್ಲದವರಿಗೆ ಸಾಲ ಸೌಲಭ್ಯ, ಉಳಿತಾಯ, ವಿಮೆ ಮತ್ತು ಇತರೆ ಹಣಕಾಸು ಸೇವೆಗಳನ್ನು ಒದಗಿಸುವ ವ್ಯವಸ್ಥೆಯೇ ಮೈಕ್ರೋ ಫೈನಾನ್ಸ್. ಆರ್‌ಬಿಐ(2011) ಪ್ರಕಾರ, ಬಡ ಮತ್ತು ಅಲ್ಪ ಆದಾಯ ವರ್ಗಗಳಿಗೆ ಸಣ್ಣ ಪ್ರಮಾಣದ ಸಾಲ ಮತ್ತು ಇತರೆ ಹಣಕಾಸಿನ ಮೂಲಗಳನ್ನು ಸರಳ ವಿಧಾನದ ಮೂಲಕ ಒದಗಿಸುವ ವ್ಯವಸ್ಥೆಯೇ, ಮೈಕ್ರೋ ಫೈನಾನ್ಸ್. ಮಹಮ್ಮದ್ ಯೂನಿಸ್– 'ಮೈಕ್ರೋ ಕ್ರೆಡಿಟ್' ಬಡವರಿಗೆ ಗಿರವಿ ಇಲ್ಲದೆ, ಸಣ್ಣ ಸಾಲಗಳನ್ನು ನೀಡುವ ಮೂಲಕ ಅವರನ್ನು ಉದ್ಯಮಿಗಳನ್ನಾಗಿ ಮಾಡಿ, ಬಡವರನ್ನು ಬಡತನದಿಂದ ಮುಕ್ತಗೊಳಿಸುವ ಸಾಧನವಾಗಿದೆ.

**ಕಿರು ಹಣಕಾಸಿನ ಲಕ್ಷಣಗಳು**

- ಸ್ವಸಹಾಯ ಗುಂಪುಗಳು ಬಡವರಿಗೆ ಮತ್ತು ಮಹಿಳೆಯರಿಗೆ ಆರ್ಥಿಕ ಸಹಾಯ ನೀಡುವುದು ಇದರ ಗುರಿ.
- ಇದು ಯಾವುದೇ ಕಾನೂನು ಆಧಾರಿತ ಒಪ್ಪಂದಗಳನ್ನು ಆಧರಿಸದೆ, ಕೇವಲ ಪರಸ್ಪರ ವಿಶ್ವಾಸ, ನಂಬಿಕೆಯನ್ನು ಆಧರಿಸಿದೆ.
- ಉತ್ಪಾದನಾ ಚಟುವಟಿಕೆಗಳು, ಸ್ವಯಂ ಉದ್ಯೋಗ ಮತ್ತು ಕುಟುಂಬದ ಆರ್ಥಿಕ ಸಹಾಯಕ್ಕೆ ಸಾಲವನ್ನು ನೀಡುತ್ತದೆ.
- 'ಜನರು ಬ್ಯಾಂಕಿಗೆ ಹೋಗದೆ, ಬ್ಯಾಂಕು ಜನರತ್ತ ಹೋಗಬೇಕು' ಎಂಬ ತತ್ವದ ಮೇಲೆ ಆಧರಿಸಿ, ಗ್ರಾಮೀಣ ಜನರ ಮನೆ ಬಾಗಿಲಿಗೆ ಹಣಕಾಸನ್ನು ಪೂರೈಸುತ್ತದೆ.
- ಹಣಕಾಸಿನ ಸೌಲಭ್ಯಗಳನ್ನು ಪಡೆಯಬೇಕಾದರೆ ಜನರು ಸ್ವಸಹಾಯ ಗುಂಪುಗಳನ್ನು ಸೇರಬೇಕು.

**ಅಧ್ಯಯನದ ಉದ್ದೇಶಗಳು:**

1. ಸ್ವಸಹಾಯ ಗುಂಪುಗಳು ಮತ್ತು ಕಿರು ಹಣಕಾಸು ಸಂಸ್ಥೆಗಳ ಕಾರ್ಯವಿಧಾನವನ್ನು ತಿಳಿಯುವದು.
2. ಸ್ವ ಸಹಾಯ ಗುಂಪು ಮತ್ತು ಕಿರು ಹಣಕಾಸು ಸಂಸ್ಥೆಗಳಲ್ಲಿನ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳನ್ನು ಅವಲೋಕಿಸುವುದು.
3. ಬಡ ಮತ್ತು ಗ್ರಾಮೀಣ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಸ್ವಸಹಾಯ ಗುಂಪುಗಳು ಮತ್ತು ಕಿರು ಹಣಕಾಸು ಸಂಸ್ಥೆಗಳು ಕಂಡುಕೊಂಡ ಮಾರ್ಗೋಪಾಯಗಳನ್ನು ತಿಳಿಯುವುದು.

[2] EBSCO (Elton B. Stephens Company) Information Services

**ಅಧ್ಯಯನದ ವಿಧಾನ**

ಈ ಸಂಶೋಧನಾ ಲೇಖನವು, ಸಂಪೂರ್ಣವಾಗಿ ಮಾಧ್ಯಮಿಕ ದತ್ತಾಂಶವನ್ನು ಅವಲಂಬಿಸಿದ್ದು, ಗುಣಾತ್ಮಕ ಮಾದರಿಯನ್ನು ಹೊಂದಿದೆ. ಮಹಿಳಾ ಸಬಲೀಕರಣ, ಸ್ವಸಹಾಯ ಗುಂಪುಗಳು ಮತ್ತು ಕಿರು ಹಣಕಾಸು ಸಂಸ್ಥೆಗಳಿಗೆ ಸಂಬಂಧಿತ ಗ್ರಂಥಗಳು, ಪುಸ್ತಕಗಳು, ಸರ್ಕಾರದ ಯೋಜನೆಗಳು, ವರದಿಗಳು, ಲೇಖನಗಳು ನಿಯತಕಾಲಿಕೆಗಳು ಮತ್ತು ಕೆಲವು ಗ್ರಂಥಗಳನ್ನು ಸಾಹಿತ್ಯಿಕ ಪರಾಮರ್ಶೆಯ ಮೂಲಕ ಅಧ್ಯಯನ ಮಾಡುವ ಉದ್ಧೇಶವನ್ನು ಹೊಂದಿದೆ.

**ಸಾಹಿತ್ಯಿಕ ಪರಾಮರ್ಶೆ**

ಭೀಮಪ್ಪ (2019)ರವರು ತಮ್ಮ ಅಧ್ಯಯನದಲ್ಲಿ ಮಹಿಳಾ ಸಬಲೀಕರಣ ಹಿಂದೆಗಿಂತಲೂ ಇಂದು ಪ್ರಸ್ತುತವಾಗಿದ್ದು, ಬದಲಾದ ಸನ್ನಿವೇಶದಲ್ಲಿ ಮಹಿಳೆಯರು ದೇಶದ ಅಭಿವೃದ್ಧಿಯಲ್ಲಿ ತೊಡಗಿಕೊಳ್ಳುವಂತೆ ಮಾಡಲು ಸ್ವಸಹಾಯ ಗುಂಪುಗಳು ಸಹಾಯಕವಾಗಿವೆ. ಮಹಿಳೆ ಇಂದು ಸ್ವಸಹಾಯ ಗುಂಪುಗಳ ಸದಸ್ಯಳಾಗಿ, ಬ್ಯಾಂಕಿನ ವ್ಯವಹಾರ, ಉಳಿತಾಯದ ಮನೋಭಾವನೆ ಜೊತೆಗೆ ಕುಟುಂಬದಲ್ಲಿ ಆರ್ಥಿಕ ನಿರ್ವಹಣೆಯನ್ನು ಮಾಡುತ್ತಿದ್ದಾಳೆ. ಇದು ಮಹಿಳೆಯರಲ್ಲಿ ಸ್ವಸಾಮರ್ಥ್ಯ ಬೆಳವಣಿಗೆ ಮತ್ತು ಆತ್ಮವಿಶ್ವಾಸ ಬೆಳೆಸುವಲ್ಲಿ ಕಾರಣವಾಗಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬಲಿಷ್ಠ ಹೊಂದಿ ತನ್ನನ್ನು ತಾನು ಗುರುತಿಸಿಕೊಳ್ಳಲು ಸ್ವಸಹಾಯ ಗುಂಪುಗಳು ಗಮನಾರ್ಹವಾದ ಬದಲಾವಣೆಯನ್ನು ತಂದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[3]

ಅರ್ನಾಬ್ ಮತ್ತು ಪ್ರೀತಿ (2019) ಸ್ವಸಹಾಯ ಗುಂಪುಗಳು ಗ್ರಾಮೀಣ ಅಥವಾ ನಗರ ಭಾಗದ ಜನರಲ್ಲಿ ಉದ್ಯಮಶೀಲತೆಯನ್ನು ಬೆಳೆಸಿ, ಅವರಲ್ಲಿ ಉದ್ಯೋಗಾವಕಾಶಗಳನ್ನು ಹೊಂದುವಂತೆ ಮಾಡಿದೆ. ವಿಶೇಷವಾಗಿ, ಮಹಿಳೆಯರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಹೊಂದುವ ಮೂಲಕ ಅವರ ಸಬಲೀಕರಣಕ್ಕೆ ಕಾರಣವಾಗಿದೆ. ಸಣ್ಣ ಸಣ್ಣ ಉದ್ಯಮಗಳನ್ನು ಮಾಡಲು ಮಹಿಳೆಯರಿಗೆ ಕಿರು ಹಣಕಾಸನ್ನು ಒದಗಿಸಿ, ಸಾಲ ಸೌಲಭ್ಯಗಳನ್ನು ನೀಡಿ, ಮಹಿಳೆಯರನ್ನು ಆಧುನಿಕ ಮಾರುಕಟ್ಟೆ, ಬ್ಯಾಂಕಿಂಗ್ ಕ್ಷೇತ್ರ, ಉತ್ಪಾದನಾ ಚಟುವಟಿಕೆ ಮತ್ತು ವಿತರಣಾ ತಂತ್ರಗಳನ್ನು ಅಳವಡಿಸಿಕೊಂಡು ಕಿರು ಉದ್ಯಮಗಳು ಸ್ಥಾಪನೆಗೆ ಸ್ವಸಹಾಯ ಗುಂಪುಗಳು ಸಹಾಯಕವಾಗಿವೆ.[4]

ರಾಜಶ್ರೀ (2011) ಸ್ವಸಹಾಯ ಗುಂಪುಗಳು ಮತ್ತು ಕಿರು ಹಣಕಾಸಿನ ಪರಿಕಲ್ಪನೆಯು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಹಿಂದುಳಿದ ವರ್ಗದ ಜನರಲ್ಲಿ ಅಭಿವೃದ್ಧಿಯಲ್ಲಿ ಹೊಸ ಆಯಾಮವನ್ನು ಸೃಷ್ಟಿಸುತ್ತದೆ. ಗ್ರಾಮೀಣ ಜನರಲ್ಲಿ ಬಡತನವನ್ನು ನಿಯಂತ್ರಿಸಿ ಸ್ವ–ಉದ್ಯೋಗ ಕೈಗೊಳ್ಳಲು ಹಣಕಾಸಿನ ನೆರವು ನೀಡುತ್ತಿದೆ. ಕಿರು ಹಣಕಾಸು ಯೋಜನೆಯ ಮಹಿಳೆಯರು ಉತ್ಪಾದನೆ ಕಾರ್ಯದಲ್ಲಿ ತೊಡಗುವಂತೆ ಮಾಡಿ, ಅವರ ಪೂರಕವಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[5]

ಸಂಜೀವಕುಮಾರ (2022) ಸ್ವಸಹಾಯ ಗುಂಪುಗಳು ಬೆಳವಣಿಗೆ ಹೊಂದಿದಷ್ಟು, ಮಹಿಳೆಯರು ಸಾಮಾಜಿಕ, ಆರ್ಥಿಕ ಸಬಲೀಕರಣ ಆಗುತ್ತದೆ ಎಂದು ಹೇಳಿದ್ದಾರೆ. ಮಹಿಳೆಯರಲ್ಲಿ ಸ್ವಸಾಮರ್ಥ್ಯವನ್ನು ಬೆಳೆಸಿ, ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಸರ್ಕಾರದ ಯೋಜನೆಗಳ ಬಗ್ಗೆ

---

3 ಹಡಪದ ಭೀಮಪ್ಪ. (2019). *ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ.* ನಿರುತಾ ಪಬ್ಲಿಕೇಶನ

4 Chakraborty A., Preeti Sharma. (2019). Increasing impact of Self Help groups on Women empowerment and Poverty Alleviation: AStudy of Reliability, *International Journal of Advance and Innovative Research*.

5 ಗುದಗನವರ ರಾಜಶ್ರೀ. (2011). ಪೂರ್ವೋಕ್ತ.

ಜಾಗೃತಿ ಉಂಟು ಮಾಡುತ್ತದೆ. ಸೂಕ್ಷ್ಮ ಹಣಕಾಸು ಯೋಜನೆಯು, ಮಹಿಳೆಯರಲ್ಲಿ ಉಳಿತಾಯದ ಮನೋಭಾವನೆ ಬೆಳೆಸುವ ಜೊತೆಗೆ ಮಹಿಳೆಯರನ್ನು ಜೀವನೋಪಾಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದೆ. ಅಷ್ಟೇ ಅಲ್ಲದೆ, ಮಹಿಳೆಯರ ಜೀವನಶೈಲಿಯಲ್ಲಿನ ಬದಲಾವಣೆ ತಂದು, ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಕಾಳಜಿ ಹೊಂದುವಂತೆ ಮಾಡಿ, ಸಾಮಾಜಿಕ ಅಭಿವೃದ್ಧಿಯಾಗಲು ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು ಸಹಾಯಕವಾಗಿವೆ.[6]

ಕೊಂಡಲ್ (2014) ಆಂಧ್ರಪ್ರದೇಶದ ಮದಕ ಜಿಲ್ಲೆಯಲ್ಲಿ, ಸುಮಾರು 100 ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರನ್ನು ಅಧ್ಯಯನಕ್ಕೆ ಒಳಪಡಿಸಿ, ಸ್ವಸಹಾಯ ಗುಂಪುಗಳು ಮಹಿಳೆಯರನ್ನು ಆರ್ಥಿಕವಾಗಿ ಬಲಪಡಿಸಿ, ಉಳಿತಾಯದ ಮನೋಭಾವನೆ ಮತ್ತು ವಿವಿಧ ಉದ್ಯಮಗಳಲ್ಲಿ ಹೂಡಿಕೆ ಮಾಡುವ ಸಾಮರ್ಥ್ಯವನ್ನು ಬೆಳೆಸುತ್ತವೆ. ಮುಂದುವರೆದು, ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕ ಸ್ವಾವಲಂಬಣೆಯಾಗಲು ಸಹಾಯಕವಾಗಿವೆ. ಅಷ್ಟೇಅಲ್ಲದೆ, ಮಹಿಳೆಯರಲ್ಲಿ ಜಾಗೃತಿಯ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಸಾಲದ ನೀತಿ ನಿಯಮಗಳ ಬಗ್ಗೆ ತಿಳುವಳಿಕೆ ನೀಡುತ್ತಿವೆ. ಒಟ್ಟಾರೆಯಾಗಿ, ಸ್ವಸಹಾಯ ಗುಂಪುಗಳು ಮಹಿಳಾ ಸಬಲೀಕರಣಕ್ಕೆ ಧನಾತ್ಮಕ ಪರಿಣಾಮ ಬೀರಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[7]

ಸ್ವಾಮಿ ಮತ್ತು ತುಳಸಿ (2013) ಕಿರು ಹಣಕಾಸು ಬಡಜನರ ಜೀವನ ಸುಧಾರಣೆ ಮತ್ತು ಅವರ ಆಹಾರ ಪದ್ಧತಿ ಮೇಲೆ ಪರಿಣಾಮ ಬೀರಿದೆ. ಸಾಮಾಜಿಕವಾಗಿ ದುರ್ಬಲ ವರ್ಗಗಳು ಆರ್ಥಿಕ ಅಭಿವೃದ್ಧಿ ಹೊಂದಲು, ಆರ್ಥಿಕವಾಗಿ ಹೂಡಿಕೆ ಮಾಡಲು, ಉದ್ಯೋಗ ಅವಕಾಶಗಳನ್ನು ಪಡೆದುಕೊಳ್ಳಲು ಮತ್ತು ಜೀವನಶೈಲಿಯನ್ನು ಸುಧಾರಿಸಿಕೊಳ್ಳಲು ಸ್ವಸಹಾಯ ಗುಂಪುಗಳು ಮತ್ತು ಕಿರು ಹಣಕಾಸು ಸಹಾಯಕವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[8]

ಅನಿತಾ ಮತ್ತು ರೇವಂಕರ್ (2007) ಮೈಕ್ರೋ ಕ್ರೆಡಿಟ್ ಯೋಜನೆಯು, ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವಲ್ಲಿ ಸಹಾಯಕವಾಗಿದೆ. ಮಹಿಳೆಯರ ಸಾಮಾಜಿಕ ಸ್ಥಾನಮಾನಗಳಲ್ಲಿ ಬದಲಾವಣೆ ಹೊಂದಲು ಮಹತ್ವದ ಪರಿಣಾಮ ಬೀರಿದೆ ಎಂದು ತಿಳಿಸಿದ್ದಾರೆ.[9]

**ಪ್ರಮುಖ ಯೋಜನೆಗಳು:**

**ನಬಾರ್ಡ್ (NABARD)**

ಈ ಸಂಸ್ಥೆಯು 1992ರಲ್ಲಿ ಸ್ವಸಹಾಯ ಗುಂಪುಗಳು ಮತ್ತು ಬ್ಯಾಂಕ್ ಲಿಂಕೇಜ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೂಲಕ ನೇರವಾಗಿ ಸಾಲ ಸೌಲಭ್ಯವನ್ನು, ಸ್ವಸಹಾಯ ಗುಂಪುಗಳಿಗೆ ನೀಡಲು ಪ್ರಾರಂಭಿಸಿತು. ಇದು ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಯೋಜನೆಯಾಗಿದೆ. ಇದು ಹಳೆಯ ಅನೌಪಚಾರಿಕ ಸಾಲದ ವ್ಯವಸ್ಥೆಯನ್ನು ಕಡಿಮೆ ಮಾಡಿ, ಅಧಿಕಾರಯುತವಾಗಿ ಸಾಲ ಸೌಲಭ್ಯಗಳನ್ನು ಪಡೆಯಲು ನೆರವಾಗಿದೆ. 2022–23ರಲ್ಲಿ ನಬಾರ್ಡ ಸಂಸ್ಥೆಯು, ಒಟ್ಟು 42.96ಲಕ್ಷ ಸ್ವಸಹಾಯ

6 ಸಂಜೀವಕುಮಾರ. (2022). *ಮೈಕ್ರೋ ಫೈನಾನ್ಸ ಆಂಡ್ ವುಮೆನ್ ಎಂಪವರ್ ಮೆಂಟ್ ಇನ್ ಇಂಡಿಯಾ.*

7 ಕಪ್ಪ ಕೊಂಡಲ್. (2014). ವುಮೆನ್ ಎಂಪವರಮೆಂಟ್ ಥ್ರೋ ಸೆಲ್ಫ್ ಹೆಲ್ಪ್ ಗ್ರೂಪ್ಸ್ ಇನ್ ಆಂಧ್ರಪ್ರದೇಶ ಇಂಡಿಯಾ, *ಇಂಟರ್ ನ್ಯಾಷನಲ್ ರಿಸರ್ಚ ಜರ್ನಲ್ ಆಫ್ ಸೋಷಿಯಲ್ ಸೈನ್ಸ, 3(1).*

8 ವಿಷ್ಣೇಶ್ವರ ಸ್ವಾಮಿ ಮತ್ತು ತುಳಸಿಮಾಲಾ. (2023). ಡಜ್ ಮೈಕ್ರೋ ಪೈನಾನ್ಸ ಇಂಪ್ಯಾಕ್ಟ ಆನ್ ಫುಡ್ ಸೆಕ್ಯುರಿಟಿ ಆಂಡ್ ಲಿವಿಂಗ್ ಸ್ಟ್ಯಾಂಡರ್ಡ ಆಫ್ ಪೂವರ್. *ಜರ್ನಲ್ ಆಫ್ ಬಿಜಿನೆಸ್ ಆಂಡ್ ಇಕೋ ಮ್ಯಾನೇಜಮೆಂಟ್.*

9 ಅನಿತಾ ಮತ್ತು ರೇವನ್ಕರ್. (2007). ಮೈಕ್ರೋ ಕ್ರೆಡಿಟ್ ಥ್ರೋ ಸೆಲ್ಫ್ ಹೆಲ್ಪ್ ಗ್ರೂಪ್ಸ ಫಾರ್ ರೂರಲ್ ಡೆವಲೊಪಮೆಂಟ್, ದ ಸೌತರ್ನ ಎಕನಾಮಿಸ್ಟ್ ಪಬ್ಲಿಷಿಂಗ್, (46)

ಗುಂಪುಗಳಿಗೆ ಸಾಲ ನೀಡಲಾಗಿದೆ ಎಂದು ನಬಾರ್ಡ ವರದಿ ನೀಡಿದೆ.

**ದೀನ್ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (Day NRLM ):** ಈ ಯೋಜನೆಯು 2011ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯ ಮೂಲಕ ಬಡ ಮಹಿಳೆಯರಿಗೆ ಸ್ವಸಹಾಯ ಗುಂಪುಗಳಾಗಿ ಸಂಘಟಿಸಿ, ಜೀವನೋಪಾಯ ವೃದ್ಧಿಸಿಕೊಳ್ಳಲು ಸಹಾಯಕವಾಗಿದೆ. ಅಷ್ಟೇ ಅಲ್ಲದೆ, ಬ್ಯಾಂಕ್ ಲಿಂಕೇಜ್, ಕೌಶಲ್ಯ ಅಭಿವೃದ್ಧಿ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಿ ಆರ್ಥಿಕ ಉತ್ಪಾದನಾ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಿದೆ.

**ಪ್ರಧಾನ ಮಂತ್ರಿ ಮುದ್ರಾ ಯೋಜನೆ (PMMY)**

ಈ ಯೋಜನೆ 2015ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು, ಇದು ಶಿಶು, ಕಿಶೋರ ಮತ್ತು ತರುಣ ಎಂಬ ಮೂರು ವಿಭಾಗಗಳಾಗಿ ವಿಂಗಡಿಸಿ, ಸಾಲಸೌಲಭ್ಯ, ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳನ್ನು ಪ್ರಾರಂಭಿಸಲು, ಯುವಕರಿಗೆ ಸ್ವಸಹಾಯ ಗುಂಪಿನ ಸದಸ್ಯರಿಗೆ ಸಣ್ಣ ಉದ್ಯಮಗಳನ್ನು ಸ್ಥಾಪಿಸಲು, ಕನಿಷ್ಠ 50ಸಾವಿರ ದಿಂದ ಗರಿಷ್ಠ 10ಲಕ್ಷದವರೆಗೆ ಸಾಲವನ್ನು ನೀಡುವ ಯೋಜನೆಯಾಗಿದೆ. ಇದರಿಂದ ಸಾಲದ ಪ್ರವೃತ್ತಿ ಸುಲಭವಾಗಿ ಹೊಸ ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಸಹಾಯಕವಾಗಿದೆ.

**ರಾಷ್ಟ್ರೀಯ ಮಹಿಳಾ ಕೋಶ**

ಭಾರತ ಸರ್ಕಾರವು 1993ರಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ, ಈ ಯೋಜನೆಯನ್ನು ಪ್ರಾರಂಭಿಸಿದೆ. ಬಡ ಮಹಿಳೆಯರು ಸಾಮಾಜಿಕ, ಆರ್ಥಿಕ ಉನ್ನತಿಯ ಹೊಂದಲು ಈ ಯೋಜನೆ ನೆರವಾಗಿದೆ. ಇದು ಸೂಕ್ಷ್ಮ ಹಣಕಾಸು ಸೇವೆಗಳನ್ನು ಒದಗಿಸಿ, ಜನರಲ್ಲಿ ಆದಾಯ ಉತ್ಪಾದಿಸುವ ಚಟುವಟಿಕೆಗಳು, ವಸತಿ ಸೌಲಭ್ಯಗಳು, ಸೂಕ್ಷ್ಮ ಮಾರುಕಟ್ಟೆಗಳು ಮತ್ತು ಕುಟುಂಬದ ಅಗತ್ಯತೆಗಳಿಗಾಗಿ ಸಾಲಗಳನ್ನು ನೀಡಲಾಗುತ್ತದೆ. ಅಷ್ಟೇ ಅಲ್ಲದೆ, ಸ್ವಸಹಾಯ ಗುಂಪುಗಳು ಮೂಲಕ ಸಾಲಸೌಲಭ್ಯ, ಮಾರುಕಟ್ಟೆ ಸಂಪರ್ಕ ಇಂತಹ ಮುಂತಾದ ಸೌಲಭ್ಯಗಳನ್ನು ನೀಡಿ, ಮಹಿಳಾ ಸಬಲೀಕರಣಕ್ಕೆ ಉತ್ತೇಜನ ನೀಡುತ್ತಿದೆ. 2018–19ರಲ್ಲಿ ಕರ್ನಾಟಕದಲ್ಲಿ ಸುಮಾರು 65ಲಕ್ಷ ರೂಪಾಯಿ ಹಂಚಿಕೆ ಮಾಡಲಾಗಿದೆ ಎಂದು ವರದಿ ಹೇಳುತ್ತದೆ.

**ಸಂಜೀವಿನಿ (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್)**

ಈ ಯೋಜನೆಯನ್ನು, ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಜಾರಿಗೆ ತಂದಿದ್ದು, ಇದು ರಾಜ್ಯದಲ್ಲಿನ ಬಡತನ ನಿರ್ಮೂಲನೆ ಮತ್ತು ಗ್ರಾಮೀಣ ಜನರ ಜೀವನೋಪಾಯ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮವಾಗಿದೆ. ಮಹಿಳೆಯರು ಸ್ವಸಹಾಯ ಗುಂಪುಗಳು ಮತ್ತು ಸಮುದಾಯ ಆಧರಿತ ಸಂಸ್ಥೆಗಳನ್ನು ರಚಿಸಿಕೊಂಡು, ಬಡ ಕುಟುಂಬಗಳಿಗೆ ಸಾಲ ಸೌಲಭ್ಯ, ಬ್ಯಾಂಕ್ ಸಾಲ ಸಂಪರ್ಕ, ಆರ್ಥಿಕ ಸಾಕ್ಷರತೆ ಮತ್ತು ಮಾರುಕಟ್ಟೆ ಬೆಂಬಲ, ಉತ್ಪಾದನಾ ಸೇವೆಗಳಂತಹ ಸೌಕರ್ಯಗಳನ್ನು ಹೊಂದಲು, ಯುವಜನರಿಗೆ ಕೌಶಲ್ಯ ಉದ್ಯೋಗ ಆಧಾರಿತ ಯೋಜನೆಗಳು ತಿಳಿಸಿಕೊಡುವ ಮೂಲಕ ಬಡವರ ಮತ್ತು ಮಹಿಳೆಯರ ಜೀವನೋಪಾಯವನ್ನು ಸುಧಾರಿಸಿಕೊಳ್ಳಲು ಈ ಯೋಜನೆಯು ಸಹಾಯಕವಾಗಿದೆ.

**ಮಹಿಳಾ ಆರ್ಥಿಕ ಅಭಿವೃದ್ಧಿ ನಿಗಮ**

ಕರ್ನಾಟಕ ರಾಜ್ಯವು ಮಹಿಳೆಯರ ಆರ್ಥಿಕ ಸ್ವಾವಲಂಬಣೆಗೆ ಸಾಲ, ತರಬೇತಿ, ಪುನರ್ವಸತಿ ಯೋಜನೆಗಳನ್ನು ಒದಗಿಸುವ ಈ ಯೋಜನೆಯು, ರಾಜ್ಯದ ಮಾಜಿ ದೇವದಾಸಿಯರು, ಬಡ ಮಹಿಳೆಯರು ಮತ್ತು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಅದರಿಂದ ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ಪ್ರಾರಂಭಿಸಲು ಸಹಾಯಕವಾಗಿದೆ.

ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದ ಜನರಿಗೆ ಉದ್ಯಮಶೀಲತೆ, ತರಬೇತಿ ಮತ್ತು ಸಾಲ ಸೌಲಭ್ಯ ನೀಡುವ ಮೂಲಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಹೆಚ್ಚಿಸಲು ಈ ಯೋಜನೆ ನೆರವಾಗಿದೆ.

**ಯೋಜನೆಗಳ ಮೂಲ ಆಶಯ**

***ಸಾಲ ಜೋಡನೆ***

ಭಾರತದ ಮೈಕ್ರೋ ಫೈನಾನ್ಸ್ ವ್ಯವಸ್ಥೆಯಲ್ಲಿ, ನಬಾರ್ಡ್ ಸಂಸ್ಥೆಯು ಪ್ರಮುಖವಾದ ಪಾತ್ರ ವಹಿಸುತ್ತಿದೆ. 1992ರಲ್ಲಿ ಆರಂಭವಾದ ಸ್ವಸಹಾಯ ಗುಂಪು–ಬ್ಯಾಂಕ್ ಲಿಂಕೆಜ್ ಪ್ರೋಗ್ರಾಮ್ ಗ್ರಾಮೀಣ ಮಹಿಳೆಯರನ್ನು ಬ್ಯಾಂಕುಗಳಿಗೆ ಸಂಪರ್ಕಿಸಿ, ಮಹಿಳೆಯರನ್ನು ಹಣಕಾಸು ಚಟುವಟಿಕೆಗೆ ತೊಡಗಿಸಿಕೊಳ್ಳುವಂತೆ ಮಾಡಿದೆ. 2022–23ರ ನಬಾರ್ಡ್ ವರದಿಯ ಪ್ರಕಾರ, ದೇಶದಲ್ಲಿ ಸುಮಾರು 1.24ಕೋಟಿ ಸ್ವಸಹಾಯ ಗುಂಪುಗಳು ಬ್ಯಾಂಕುಗಳಿಗೆ ಜೋಡಣೆಯಾಗಿದ್ದು, ಅವುಗಳಲ್ಲಿ ಸುಮಾರು 88.90ರಷ್ಟು, ಮಹಿಳಾ ಸ್ವಸಹಾಯ ಗುಂಪುಗಳೇ ಆಗಿವೆ. ಈ ಗುಂಪುಗಳು ಒಟ್ಟು. 47,000ಕೋಟಿಗಿಂತ ಹೆಚ್ಚು ಉಳಿತಾಯ ಠೇವಣಿಯನ್ನು ಹೊಂದಿದ್ದು, ಸುಮಾರು 1.37ಲಕ್ಷ ಕೋಟಿ ಸಾಲವನ್ನು ಗುಂಪುಗಳಿಗೆ ನೀಡಲಾಗಿದೆ ಎಂದು ನಬಾರ್ಡ್ ವರದಿ ನೀಡಿದೆ. ಅದೇ ರೀತಿಯಾಗಿ, ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಸ್ವಸಹಾಯ ಗುಂಪುಗಳಿಗೆ ಪರೋಕ್ಷವಾಗಿ, ಭಾರತದಲ್ಲಿ ಸುಮಾರು. 3ಲಕ್ಷ ಕೋಟಿಗೂ ಅಧಿಕ ಸಾಲ ಸೌಲಭ್ಯವನ್ನು ನೀಡುತ್ತಿವೆ. ಅದರಲ್ಲಿ ಮಹಿಳಾ ಸದಸ್ಯರೇ ಹೆಚ್ಚಾಗಿದ್ದಾರೆ. ಈ ಎಲ್ಲಾ ಹಣಕಾಸಿನ ಸೌಲಭ್ಯಗಳನ್ನು ಪಡೆದುಕೊಂಡ ಮಹಿಳಾ ಸದಸ್ಯರು ಸ್ವ–ಉದ್ಯೋಗ, ಸಣ್ಣ ಉದ್ಯಮಗಳ ಅಭಿವೃದ್ಧಿ, ಗುಡಿ ಕೈಗಾರಿಕೆಗಳು ಹಾಗೂ ಆರ್ಥಿಕ ಸ್ವಾವಲಂಬನೆಗೆ ಸಾಧಿಸಲು ಈ ಸಂಸ್ಥೆಗಳು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಸ್ವಸಹಾಯ ಗುಂಪು ಮತ್ತು ಬ್ಯಾಂಕ್ ಲಿಂಕೇಜ್ ಯೋಜನೆಯಲ್ಲಿ ಮುಂಚೂಣಿ ಸ್ಥಾನದಲ್ಲಿದ್ದು, ಇದು ದಕ್ಷಿಣ ಭಾರತದಲ್ಲಿಯೇ ಶೇ.50ಕ್ಕಿಂತ ಹೆಚ್ಚು ಪಾಲು ಹೊಂದಿದೆ ಎಂದು ನಬಾರ್ಡ್ ವರದಿ ಮಾಡಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ, ಮಹಿಳಾ ಸ್ವಸಹಾಯ ಗುಂಪುಗಳು ಬ್ಯಾಂಕುಗಳೊಂದಿಗೆ ಸಾಲ ಜೋಡಣೆ ಹೊಂದುವುದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಸಮಾಜದಲ್ಲಿ ಮಹತ್ವದ ಬದಲಾವಣೆಗಳು ಬೆಳೆದು ಬರಲು ಕಾರಣವಾಗುತ್ತಿವೆ. ಮುಖ್ಯವಾಗಿ ಮಹಿಳೆಯರು ಸಹಕಾರಿ ಬ್ಯಾಂಕ್, ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳಲ್ಲಿ ನೇರವಾಗಿ ಸಾಲ ಪಡೆಯುವ ಅವಕಾಶ ನೀಡಲಾಯಿತು. ಜೊತೆಗೆ ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯಗಳು, ಸ್ವ–ಉದ್ಯೋಗ, ಸಣ್ಣ ಉದ್ಯಮಗಳ ಅಭಿವೃದ್ಧಿ, ಉಳಿತಾಯ ಚಟುವಟಿಕೆಗಳು ಜೊತೆ ಜೊತೆಗೆ, ಸಮಾಜದಲ್ಲಿ ಬದಲಾವಣೆ ಬೆಳೆದು ಬರಲು ಕಾರಣವಾಗುತ್ತಿದೆ. ಇದು ಮಹಿಳೆಯರನ್ನು ಸಮಾಜದಲ್ಲಿ ಭಾಗವಹಿಸುವಿಕೆ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವದ ಗುಣಗಳನ್ನು ಹೆಚ್ಚಿಸಿಕೊಂಡು, ಪ್ರತಿಯೊಂದು ಕ್ಷೇತ್ರದಲ್ಲಿ ಸಕ್ರಿಯರಾಗಿ ತೊಡಗಿಕೊಳ್ಳಲು ಸಹಾಯಕವಾಗಿದೆ. ಇದು ಗ್ರಾಮೀಣ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಿ ಕುಟುಂಬ ಮತ್ತು ಸಮಾಜದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದರ ಜೊತೆಗೆ ಮಹಿಳಾ ಸಬಲೀಕರಣಕ್ಕೆ ಕಾರಣಭೂತವಾಗಿವೆ.

***ಉತ್ಪಾದನಾ ಚಟುವಟಿಕೆ***

ಮೈಕ್ರೋ ಫೈನಾನ್ಸ್ ಕ್ಷೇತ್ರದಲ್ಲಿ, ಸ್ವಸಹಾಯ ಗುಂಪುಗಳ ಸದಸ್ಯರು ಸಾಕಷ್ಟು ಸಾಲ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. 2023ರಲ್ಲಿ, ಸ್ವಸಹಾಯ ಗುಂಪುಗಳಿಗೆ ನೀಡಿದ ಒಟ್ಟು ಬಾಕಿ ಸಾಲವು 1.45ಲಕ್ಷ

ಕೋಟಿ ಮೀರಿದೆ. ಈ ಸಾಲದಿಂದ ಮಹಿಳೆಯರು ಕೃಷಿ, ಹಾಲು ಉತ್ಪಾದನೆ, ಪಶುಸಂಗೋಪನೆ, ಆಹಾರ ಸಂಸ್ಕರಣ ಘಟಕಗಳನ್ನು, ಮಸಾಲೆ ತಯಾರಿಕೆ ಮತ್ತು ಪಾಪಡ್ ತಯಾರಿಕೆ ಹೀಗೆ, ಮುಂತಾದ ಆದಾಯ ಉತ್ಪಾದನಾ ಚಟುವಟಿಕೆಗಳಲ್ಲಿ ಪಾಲ್ಗೊಂಡು, ತಮ್ಮ ಆರ್ಥಿಕ ಸ್ವಾವಲಂಬನೆ ಮತ್ತು ಸ್ವಉದ್ಯೋಗವನ್ನು ಹೊಂದಲು ಕಾರಣವಾಗಿದೆ. ಅಷ್ಟೇ ಅಲ್ಲದೆ, ಮೈಕ್ರೋ ಫೈನಾನ್ಸ್ ಸೇವೆಗಳನ್ನು ಹೊಂದಿರುವ ಮಹಿಳೆಯರ ಸಂಖ್ಯೆಯು 6ಕೋಟಿಗೂ ಮೀರಿದ್ದು, ಅದರಲ್ಲಿ ಬಹುಪಾಲು ಗ್ರಾಮೀಣ ಪ್ರದೇಶದವರೇ ಆಗಿದ್ದಾರೆ. ಇದು ಸಣ್ಣ ಕೈಗಾರಿಕೆಗಳನ್ನು, ಉದ್ಯಮಗಳನ್ನು, ಉತ್ಪಾದಕ ಚಟುವಟಿಕೆಗಳನ್ನು ಪ್ರಾರಂಭಿಸಿ ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ. ಒಂದು ಅಧ್ಯಯನಗಳ ಪ್ರಕಾರ, ಸ್ವಸಹಾಯ ಗುಂಪುಗಳ ಸದಸ್ಯರ ಕುಟುಂಬದ ಆದಾಯದಲ್ಲಿ ಶೇ. 20–30ರಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದಾರೆ ಎಂದು ತಿಳಿದುಬಂದಿದೆ. ಹೀಗೆ, ಸ್ವಸಹಾಯ ಗುಂಪುಗಳು ಮಹಿಳೆಯರಿಗೆ ನಿಯಮಿತವಾದ ಸಭೆಗಳು, ತರಬೇತಿ, ಕಾರ್ಯಕ್ರಮಗಳ ಜಾಗೃತಿ, ಬ್ಯಾಂಕ್ ಸಂಪರ್ಕ, ನಾಯಕತ್ವದ ಕೌಶಲ್ಯಗಳು, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕವಾಗಿ ಪಾಲ್ಗೊಳ್ಳುವಿಕೆ ಇವೆಲ್ಲವೂ ಮಹಿಳೆಯರನ್ನು ಸಮಾಜದ ಮುಂಚೂಣಿಗೆ ತಂದು ಮಹಿಳಾ ಸಬಲೀಕರಣಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡುತ್ತಿದೆ ಎಂದು ಹೇಳಬಹುದು.

### *ಆರ್ಥಿಕ ಸಾಮರ್ಥ್ಯ ದೃಷ್ಟಿಕೋನ*

ಮೈಕ್ರೋ ಫೈನಾನ್ಸ್ ಮತ್ತು ಸ್ವಸಹಾಯ ಗುಂಪುಗಳು ಮಹಿಳೆಯರಲ್ಲಿ ಆರ್ಥಿಕ ಸಾಮರ್ಥ್ಯ ಹೆಚ್ಚಿಸುವ ಪ್ರಮುಖ ಸಾಧನವಾಗಿವೆ. ಪ್ರಮುಖವಾಗಿ ಆರ್ಥಿಕ ಸಂಪನ್ಮೂಲ ನಿರ್ವಹಣೆ, ಆಸ್ತಿ ನಿರ್ಮಾಣ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದೆ. ನಬಾರ್ಡ್ ಅಂಕಿ ಅಂಶಗಳ ಪ್ರಕಾರ, ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸುಮಾರು 6ಕೋಟಿ ಮಹಿಳೆಯರು, ಸುಮಾರು 3ಲಕ್ಷ ಕೋಟಿ ಅಧಿಕ ಸಾಲವನ್ನು ಪಡೆದುಕೊಂಡಿದ್ದಾರೆ. ಇದು ಮಹಿಳೆಯರು ಹಣಕಾಸಿನ ಒಳಗೊಳ್ಳುವಿಕೆಯ ವ್ಯಾಪ್ತಿಯನ್ನು ತೋರಿಸುತ್ತದೆ. ಅದೇರೀತಿ, ಮಹಿಳೆಯರಲ್ಲಿ ಬ್ಯಾಂಕುಗಳ ಬಗೆಗಿನ ಮಾಹಿತಿ, ಸಾಲದ ನಿರ್ವಹಣೆ, ಖಾತೆಯ ನಿರ್ವಹಣೆ, ಬ್ಯಾಂಕ್‌ನ ಸೌಲಭ್ಯಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಆದಾಯ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಸಹಾಯಕವಾಗಿದೆ. ಗುಂಪುಗಳಿಂದ ಪಡೆದ ಸಾಲವನ್ನು ಮನೆ ನಿರ್ಮಾಣ, ಪಶು ಖರೀದಿ, ಕೃಷಿ ಸಲಕರಣೆಗಳ ಖರೀದಿ ಮತ್ತು ಆಸ್ತಿ ನಿರ್ಮಾಣ ಚಟುವಟಿಕೆಗಳನ್ನು ಸಾಕಷ್ಟು ಹೂಡಿಕೆ ಮಾಡಿ, ಮಹಿಳೆಯರಲ್ಲಿ ಆರ್ಥಿಕ ಭದ್ರತೆಯು ಹೆಚ್ಚಾಗುತ್ತಿದೆ. ಇದರಿಂದ ಕುಟುಂಬದ ಹಣಕಾಸಿನ ನಿರ್ಧಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿದೆ. ಇದು ಮಹಿಳೆಯನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡಿದೆ.

### *ಬಡತನ ನಿರ್ಮೂಲನೆ ದೃಷ್ಟಿಕೋನ*

ಮೈಕ್ರೋ ಫೈನಾನ್ಸ್ ಮತ್ತು ಸ್ವಸಹಾಯ ಗುಂಪುಗಳು ಬಡತನ ನಿರ್ಮೂಲನೆ ಪ್ರಮುಖ ಸಾಧನವಾಗಿದೆ. ಇದು ಸಾಲ ಜೋಡಣೆ, ಉಳಿತಾಯದ ಪರಿಕಲ್ಪನೆ, ಉತ್ಪಾದಕ ಚಟುವಟಿಕೆಗಳು ಮತ್ತು ಸಂಘಟನೆ ಆಧರಿತ ಚಟುವಟಿಕೆಗಳು ಬೆಳೆದು ಬಂದು, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಮೇಲೆ ಪ್ರಭಾವ ಬೀರಿದೆ. ಈ ಯೋಜನೆಯಡಿ, ಸುಮಾರು 47,000ಕೋಟಿ ರೂಪಾಯಿ ಉಳಿತಾಯ ಮಾಡುವುದರ ಮೂಲಕ ಮಹಿಳೆಯರು ಉಳಿತಾಯದ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಸ್ವಸಹಾಯ ಗುಂಪುಗಳಿಂದ ಸಾಕಷ್ಟು ಸಾಲ ಸೌಲಭ್ಯಗಳನ್ನು ಪಡೆದುಕೊಂಡು ಪಶುಸಂಗೋಪನೆ, ಗುಡಿ ಕೈಗಾರಿಕೆ, ಹೈನುಗಾರಿಕೆ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸಿ, ತಮ್ಮ ಕುಟುಂಬದ ಬಡತನವನ್ನು ಹೋಗಲಾಡಿಸಲು ನೆರವಾಗಿದ್ದಾರೆ. ಇದು

ಮಹಿಳೆಯರಲ್ಲಿ ಉಳಿತಾಯ ಚಟುವಟಿಕೆ, ಸಾಲ ಸೌಲಭ್ಯಗಳು, ಆರ್ಥಿಕ ಸ್ವಾವಲಂಬನೆಯು ಬೆಳೆದು, ಕುಟುಂಬದ ಜವಾಬ್ದಾರಿತನ ಮತ್ತು ದೀರ್ಘಕಾಲದ ಆರ್ಥಿಕ ಸ್ಥಿರತೆಗೆ ಕಾರಣವಾಗಿದೆ. ನಬಾರ್ಡ್ ಅಂಕಿ ಅಂಶಗಳ ಪ್ರಕಾರ, ಗುಂಪುಗಳು 1.45ಲಕ್ಷ ಕೋಟಿ ಸಾಲ ಜೋಡಣೆಯನ್ನು ಹೊಂದಿದ್ದು, ಸುಮಾರು, 47,000ಕೋಟಿ ರೂ. ಉಳಿತಾಯ ಮತ್ತು ಸುಮಾರು, 6ಕೋಟಿಗೂ ಹೆಚ್ಚು ಮಹಿಳಾ ಸದಸ್ಯರು ಭಾಗವಹಿಸುವಂತೆ ಮಾಡಿದೆ. ಇದರಿಂದ ಸ್ವಸಹಾಯ ಗುಂಪುಗಳು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಬಡತನ ನಿರ್ಮೂಲನೆಗೆ ಸ್ಪಷ್ಟವಾದ ಕೊಡುಗೆ ನೀಡುತ್ತಿವೆ ಎಂದು ತಿಳಿಯಬಹುದು. ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ, ಸ್ವಯಂ ಉದ್ಯೋಗ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಸಾಮಾಜಿಕವಾಗಿ ಭಾಗವಹಿಸುವಿಕೆ ಹೆಚ್ಚಾಗಿ ಮಹಿಳೆಯರು ಸಮಾಜದಲ್ಲಿ ಉತ್ತಮವಾದಂತಹ ಜೀವನಶೈಲಿಗಳನ್ನು ಹೊಂದಿ, ಗೌರವಕ್ಕೂ ಕೂಡ ಪಾತ್ರ ಆಗುತ್ತಿದ್ದಾರೆ.

**ಅಧ್ಯಯನದ ಫಲಿತಾಂಶ**

1. ಸ್ವಸಹಾಯ ಗುಂಪುಗಳು ಮಹಿಳೆಯರಿಗೆ ಶಿಕ್ಷಣ, ಆರೋಗ್ಯ ಮತ್ತು ಜೀವನಶೈಲಿಯ ಬಗ್ಗೆ ಅರಿವನ್ನು ಉಂಟು ಮಾಡಿ, ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ.
2. ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಸಾಲದಿಂದ ಅನೌಪಚಾರಿಕ ಸಾಲಗಳ ಅವಲಂಬನೆ ಕಡಿಮೆಯಾಗಿ, ನೇರವಾಗಿ ಬ್ಯಾಂಕ್‌ನ ಸಾಲದ ವ್ಯವಸ್ಥೆಗೆ ಪ್ರವೇಶಿಸುವಂತೆ ಮಾಡಿದೆ.
3. ಸ್ವಸಹಾಯ ಗುಂಪುಗಳು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಮಹಿಳೆಯರಲ್ಲಿ ಹಣಕಾಸಿನ ಶಿಸ್ತು, ಸಾಮರ್ಥ್ಯ, ಉತ್ಪಾದನೆ ಚಟುವಟಿಕೆ, ವ್ಯಾಪಾರ–ವ್ಯವಹಾರ ಹೀಗೆ, ಮುಂತಾದ ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯೋಗಿಕ ಸ್ವಾವಲಂಬನೆ ಬೆಳೆಯಲು ಕಾರಣವಾಗಿದೆ.
4. ಬ್ಯಾಂಕುಗಳು ಸಾಲ ಸೌಲಭ್ಯಗಳನ್ನು ಮಹಿಳೆಯರಿಗೆ ನೀಡುವುದರಿಂದ ಮಹಿಳೆಯರ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿವೆ.
5. ಹಣಕಾಸಿನ ಸಹಾಯದಿಂದ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಉಳಿತಾಯ ಸಂಸ್ಕೃತಿ ಮತ್ತು ಸಾಲಸೌಲಭ್ಯಗಳಿಂದ ತಮ್ಮ ಕುಟುಂಬದಲ್ಲಿನ ಬಡತನ ನಿವಾರಣೆ ಮತ್ತು ಜೀವನಮಟ್ಟ ಸುಧಾರಣೆಗೆ ಕಾರಣವಾಗಿದೆ.
6. ಸ್ವಸಹಾಯ ಗುಂಪುಗಳಿಂದ ಮಹಿಳೆಯರು ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುವಂತೆ ಮಾಡಿ ಮಹಿಳೆಯರನ್ನು ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ.

**ಉಪಸಂಹಾರ**

ಭಾರತದಲ್ಲಿ ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣಕ್ಕೆ ಕಿರು ಹಣಕಾಸು (Microfinance) ಹಾಗೂ ಸ್ವಸಹಾಯ ಗುಂಪುಗಳು(SHG) ಪ್ರಮುಖ ಸಾಧನಗಳಾಗಿ ಹೊರಹೊಮ್ಮಿವೆ. ಸರ್ಕಾರದ ಹಲವು ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಬಡಜನರು, ವಿಶೇಷವಾಗಿ ಮಹಿಳೆಯರಿಗೆ, ಆರ್ಥಿಕ ನೆರವನ್ನು ಒದಗಿಸುವುದರಿಂದ ಅವರ ಜೀವನಶೈಲಿಯಲ್ಲಿ ಗಣನೀಯ ಬದಲಾವಣೆಗಳು ಕಂಡುಬಂದಿದೆ. ಸಣ್ಣ ರೀತಿಯ ಸಾಲ ಸೌಲಭ್ಯಗಳು ಮಹಿಳೆಯರಲ್ಲಿ ಸ್ವಾವಲಂಬನೆ ಬೆಳೆಸುವುದರ ಜೊತೆಗೆ ಸಣ್ಣ ರೀತಿಯ ಉದ್ಯಮಗಳ ಸ್ಥಾಪನೆಗೆ ಸಹಕಾರಿಯಾಗಿವೆ.

ಸ್ವಸಹಾಯ ಗುಂಪುಗಳು ಮಹಿಳೆಯರಲ್ಲಿ ಉಳಿತಾಯದ ಮನೋಭಾವನೆ, ನಾಯಕತ್ವ ಗುಣಗಳು, ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಜಾಗೃತಿಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಇದರಿಂದ ಕುಟುಂಬ ಮತ್ತು ಮಹಿಳೆಯರಲ್ಲಿ ಹಣಕಾಸಿನ ಚಟುವಟಿಕೆಗಳು ಹೆಚ್ಚಳವಾಗಿ, ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು

ಜೀವನಶೈಲಿಯಲ್ಲಿ ಉತ್ತಮವಾದ ಬದಲಾವಣೆಗಳು ಉಂಟಾಗಿವೆ.

ಅದರಿಂದ, ಕಿರು ಹಣಕಾಸು ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ ನೆರವಾಗುವುದರ ಮೂಲಕ ಬಡತನ ನಿರ್ಮೂಲನೆಗೆ ಪರಿಣಾಮಕಾರಿ ಸಾಧನಗಳಾಗಿವೆ. ಅಷ್ಟೇಅಲ್ಲದೆ, ಈ ಸಂಸ್ಥೆಗಳಿಂದ ಇನ್ನಷ್ಟು ಮಹಿಳೆಯರನ್ನು ಬಲಪಡಿಸುವ ನೀತಿಗಳು ಮತ್ತು ಕಾರ್ಯಕ್ರಮಗಳ ಬೆಳೆದು ಬರಬೇಕು. ಇದಕ್ಕೆ ಪೂರಕವಾಗಿ, ಸರ್ಕಾರವು ಸಹ ಹೊಸ ಹೊಸ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಉತ್ತಮ ಕಾರ್ಯಕ್ರಮಗಳನ್ನು ನೀಡುವಂತೆ ಕ್ರಮ ಕೈಗೊಳ್ಳಬೇಕು. ಮುಂದುವರೆದು, ಪ್ರತಿಯೊಂದು ಯೋಜನೆಗಳು, ನೀತಿಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ, ಸರ್ಕಾರದೊಂದಿಗೆ, ಮಹಿಳೆಯರು ಮತ್ತು ಸಾಮಾನ್ಯ ಜನರು ಸಕ್ರಿಯವಾಗಿ ಭಾಗವಹಿಸಿ, ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸುವುದು ಬಹಳ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಹಡಪದ ಭೀಮಪ್ಪ. (2019). *ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಂಘಗಳ ಪಾತ್ರ.* ನಿರುತಾ ಪಬ್ಲಿಕೇಶನ್.
- ಹಾಲತಿ ಸೋಮಶೇಖರ. (2000). *ಸ್ತ್ರೀಪರ ಕಾನೂನುಗಳು ಮತ್ತು ಸಂಘಟನೆಗಳು.* ವಿಸ್ಮಯ ಪ್ರಕಾಶನ.
- ರಾಜಶ್ರೀ ಗುದಗನವರ. (2011). *ಗ್ರಾಮೀಣ ಅಭಿವೃದ್ಧಿಯಲ್ಲಿ ಕಿರು ಹಣಕಾಸು ಸಂಸ್ಥೆ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಸಂಜೀವಕುಮಾರ. (2022). ಮೈಕ್ರೋ ಫೈನಾನ್ಸ್ ಆಂಡ್ ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ.
- Chakraborty, A., & Sharma, P. (2019). Increasing impact of self-help groups on women empowerment and poverty alleviation: A study of reliability. *International Journal of Advance and Innovative Research*.
- Heggani, J., & Sindhe, R. (2014, October). Women empowerment through self-help groups: A review of literature. *Research Paper, 4*.
- Manjunatha, S. (2013, September). The role of women self-help groups in rural development of Karnataka State, India. *International Research Journal of Social Science, 2*(9), 23–25.
- Mayoux, L. (n.d.). *Micro finance and the empowerment of women: A review of the key issues*
- Mengstie, B. (n.d.). *Impact of microfinance on women's economic empowerment*. Research Open Access.
- Sreenivasa, K. N. (2023, April). Role of self-help groups in women empowerment in rural Karnataka. *International Journal of Advances in Engineering and Management, 5*.